ಅಂತರದಲ್ಲಿದ್ದ ಪ್ರಯಾಣಿಕರೊಬ್ಬರು ಚೀರಿದರು. ಕಾರಣ ಗೊತ್ತಾಗಲಿಲ್ಲ.

ಎದುರಿನ ಟೆಲಿವಿಷನ್ ಪರದೆಯಲ್ಲಿ ವಿಮಾನದ ಪ್ರಯಾಣದ ವಿವರಗಳು ಬರುತ್ತಿದ್ದವು. ಕ್ರಮಿಸಿದ ದೂರ ಮತ್ತು ಕ್ರಮಿಸಬೇಕಾದ ದೂರ, ಹಾರುತ್ತಿರುವ ಎತ್ತರ, ಗಾಳಿಯ ವೇಗ, ಆ ಕ್ಷಣದಲ್ಲಿ ಇರುವ ಜಾಗ ಮತ್ತು ವಿಮಾನದ ಹೊರಗಿನ ಮತ್ತು ಒಳಗಿನ ಉಷ್ಣಾಂಶ ಎಲ್ಲವನ್ನೂ ತಿಳಿಸುತ್ತಿತ್ತು. ಅಲ್ಲಿ ಬಿತ್ತರವಾಗುತ್ತಿದ್ದ ಮಾಹಿತಿಯ ಪ್ರಕಾರ ಕ್ರಮಿಸಬೇಕಾದ ದೂರ ಇನ್ನೂ ಎರಡೂವರೆ ಸಾವಿರ ಮೈಲುಗಳಿತ್ತು. ವಿಮಾನ 35 ಸಾವಿರ ಅಡಿ ಎತ್ತರದಲ್ಲಿತ್ತು. ಅಂತಹ ಮಾಹಿತಿಗಳನ್ನು ಹಲವು ಸಲ ನೋಡಿದ್ದರಿಂದ ದೇವರಾಜುಗೆ ಆ ಅಂಕಿಗಳು ಯಾವ ರೀತಿಯ

